2019 ಕ.ತೀ.ವ 1335

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ
ಮತ್ತು
ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎಂ. ಶ್ಯಾಮ್ ಪ್ರಸಾದ್

ಶ್ರೀ ಸಿದಗೌಡ ಎನ್. ಪಾಟೀಲ –ವಿರುದ್ಧ– ಭಾರತ ಸರ್ಕಾರ ಮತ್ತು ಇತರರು*

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಅಧಿನಿಯಮದ 25(1)ನೇ ಪ್ರಕರಣ.

ಪ್ರಸ್ತುತ ಪ್ರಕರಣದಲ್ಲಿ ಮೇಲ್ಮನವಿದಾರನು ತರಬೇತಿ ಅವಧಿಯ ಪೂರ್ಣಗೊಳಿಸುವಿಕೆಯ ನಂತರ ತನ್ನ ಹುದ್ದೆಯಲ್ಲಿ ಪರಿಗಣಿಸಲ್ಪಟ್ಟ ದೃಢೀಕರಣದ ಅನುಕೂಲತೆಯನ್ನು ಪ್ರತಿಪಾದಿಸುತ್ತಿದ್ದಾನೆ.

ಮಾನ್ಯ ನ್ಯಾಯಾಲಯವು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಅಧಿನಿಯಮ 25(1)ನೇ ಪ್ರಕರಣದ ಅಡಿಯಲ್ಲಿನ ನಿಯಮಗಳನ್ನು ಪರಿಗಣಿಸಿ ಮತ್ತು ಪ್ರತಿವಾದಿ ಕೇಂದ್ರ ಸರ್ಕಾರದ ವಾದವನ್ನು ಆಲಿಸಿ ಪ್ರಸ್ತುತ ಮೇಲ್ಮನವಿಯನ್ನು ತಿರಸ್ಕರಿಸುತ್ತ ಈ ಕೆಳಗಿನಂತೆ ನಿರ್ಣಯಿಸಿದೆ.

ಪ್ರೋಬೇಷನರಿ ಅವಧಿಯು ಸಮಾಧಾನಕರವಾಗಿ ಮುಕ್ತಾಯವಾಗಿದೆ ಎಂಬ ನಿರ್ಣಯ ಇಲ್ಲದೇ ಇದ್ದಾಗಿಯೂ ಕೈಗಾರಿಕಾ ಭದ್ರತಾ ಪಡೆ ಅಧಿನಿಯಮ 25(1)ರ ಪ್ರಕರಣದ ಅಡಿಯಲ್ಲಿ ತನ್ನ ಹುದ್ದೆಯಲ್ಲಿ ಪರಿಗಣಿಸಲ್ಪಟ್ಟ ದೃಢೀಕರಣದ ಅನುಕೂಲತೆಯನ್ನು ಈ ಪ್ರಕರಣದಲ್ಲಿ ಮಾನ್ಯ ಮಾಡಬೇಕೆಂಬ ಮೇಲ್ಮನವಿದಾರನ ವಾದವನ್ನು ತಿರಸ್ಕರಿಸಿದೆ.

*ರಿಟ್ ಅಪೀಲು ಸಂಖ್ಯೆ: 31261/2013, ದಿನಾಂಕ 12ನೇ ಜುಲೈ, 2018.

ಪ್ರತಿವಾದಿ ಕೇಂದ್ರ ಸರ್ಕಾರದ ವಾದವನ್ನು ಪರಿಗಣಿಸಿ ಕೈಗಾರಿಕಾ ಭದ್ರತಾ ಪಡೆ ಅಧಿನಿಯಮ, 25(1)ನೇ ಪ್ರಕರಣದ ನಿಯಮಗಳನ್ನು ಕೂಲಂಕುಶವಾಗಿ ಓದಿದಾಗ, ಪ್ರೋಬೇಷನ್ ಅವಧಿಯು ಸಮಾಧಾನಕರವಾಗಿ ಮುಕ್ತಾಯವಾಗಿದೆ ಎಂಬ ನಿರ್ಣಯವನ್ನು ತೆಗೆದುಕೊಳ್ಳದ ಹೊರತು ಪ್ರೋಬೇಷನರಿ ನೌಕರನು ಪ್ರೋಬೇಷನರಿ ಅಗಿಯೇ ಮುಂದುವರಿಯುತ್ತಾನೆ ಎಂದು ತೀರ್ಮಾನಿಸಿದೆ. ಈ ತೀರ್ಮಾನದಲ್ಲಿ ಮಾನ್ಯ ನ್ಯಾಯಾಲಯವು ಸರ್ವೋಚ್ಚ ನ್ಯಾಯಾಲಯದ ಪ್ರಕರಣಗಳಾದ ಸುಕುಬನ್ಸ್ *ಸಿಂಗ್ -ವಿರುದ್ಧ- ಸ್ಟೇಟ್ ಆಫ್ ಪಂಜಾಬ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ -ವಿರುದ್ಧ- ಪಾಲಕ್ ಮೋದಿ ಮತ್ತು ದೀಪ್ತಿ ಪ್ರಕಾಶ್ ಬ್ಯಾನರ್ಜಿ -ವಿರುದ್ಧ- ಸತ್ಯೇಂದ್ರನಾಥ ಬೋಸ್ ನ್ಯಾಷನಲ್ ಸೆಂಟರ್ ಫಾರ್ ಬೇಸಿಕ್ ಸೈನ್ಸ್‌ಸ್*, ಈ ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳನ್ನು ಪಾಲಿಸಿ ಈ ಮೇಲ್ಮನವಿಯನ್ನು ತಿರಸ್ಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. (2013) 3 ಎಸ್‌ಸಿಸಿ 607<br>ಸ್ಟೇಟ್ ಬ್ಯಾಂಕ್ ಆಫ್<br>ಇಂಡಿಯಾ ಮತ್ತು ಇತರರು -ವಿರುದ್ಧ-<br>ಪಾಲಾಕ್ ಮೋದಿ ಮತ್ತು ಇತರರು* | *(ಉಲ್ಲೇ) 6* |
| *2. (2000) 5 ಎಸ್‌ಸಿಸಿ 152<br>ಚಂದ್ರ ಪ್ರಕಾಶ ಶಾಹಿ -ವಿರುದ್ಧ-<br>ಉತ್ತರ ಪ್ರದೇಶ ರಾಜ್ಯ ಮತ್ತು ಇತರರು* | *(ಉಲ್ಲೇ) 6* |
| *3. (2015) 15 ಎಸ್‌ಸಿಸಿ 151<br>ರತ್ನೇಶ್ ಕುಮಾರ್ ಚೌಧರಿ -ವಿರುದ್ಧ-<br>ಇಂದಿರಾ ಗಾಂಧಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಪಾಟ್ನಾ,<br>ಬಿಹಾರ್ ಮತ್ತು ಇತರರು* | *(ಉಲ್ಲೇ) 6* |

*4. (2012) 4 ಎಸ್‌ಸಿಸಿ 793*
*ಮುಖ್ಯೋಪಾಧ್ಯಾಯರು, ಲಾರೆನ್ಸ್ ಸ್ಕೂಲ್ –ವಿರುದ್ಧ–*
*ಜಯಂತಿ ರಘು ಮತ್ತು ಮತ್ತೊಬ್ಬರು (ಉಲ್ಲೇ) 12*

*5. (2001) 7 ಎಸ್‌ಸಿಸಿ 161*
*ರಿಜಿಸ್ಟ್ರಾರ್ ಮತ್ತು ಇತರರು –ವಿರುದ್ಧ–*
*ಸತ್ಯ ನಾರಾಯಣ ಜಾವರ್‌ರ ಮೂರು ನ್ಯಾಯಾಧೀಶರ ಪೀಠ,*
*ಮಧ್ಯಪ್ರದೇಶ ಉಚ್ಚ ನ್ಯಾಯಾಲಯ (ಉಲ್ಲೇ) 12*

*6. (1993) 3 ಎಸ್‌ಸಿಸಿ 60*
*ದೀಪ್ತಿ ಪ್ರಕಾಶ್ ಬ್ಯಾನರ್ಜಿ –ವಿರುದ್ಧ–*
*ಸತ್ಯೇಂದ್ರ ನಾಥ್ ಬೋಸ್‌ನ ನ್ಯಾಷನಲ್ ಸೆಂಟರ್*
*ಫಾರ್ ಬೇಸಿಕ್ ಸೈನ್ಸ್, ಕಲ್ಕತ್ತಾ ಮತ್ತು ಇತರರು (ಉಲ್ಲೇ) 14*

ಅಪೀಲುದಾರರ ಪರ: ಶ್ರೀ ಎಂ.ಆರ್. ರಾಜಗೋಪಾಲ್ ಮತ್ತು ಶ್ರೀ ಕೆ.ಎಚ್. ಭಾಗಿ, ವಕೀಲರು.

ಪ್ರತ್ಯಪೀಲುದಾರರ ಪರ : ಶ್ರೀ ಎಂ.ಬಿ. ಕಣವಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಶ್ಯಾಮ್ ಪ್ರಸಾದ್:**

ಅರ್ಜಿದಾರರು, ರಿಟ್ ನ್ಯಾಯಾಲಯದ ಆದೇಶ ದಿನಾಂಕ: 23.07.2013ರ ರಿಟ್ ಅರ್ಜಿ ವಜಾಗೊಳಿಸಿದ್ದನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ: 12480/2010ರಲ್ಲಿ ಅಂತರ ನ್ಯಾಯಾಲಯ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ.

ಸದರಿ ಅಪೀಲುದಾರರು /ಅರ್ಜಿದಾರರು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿ (ಸಂಕ್ಷಿಪ್ತತೆಗಾಗಿ ಸಿ.ಐ.ಎಸ್.ಎಫ್.) ಪೇದೆಯಾಗಿ ನೇಮಕವಾಗಿದ್ದು, ಸಿ.ಐ.ಎಸ್.ಎಫ್.ನ ಹಿರಿಯ ಕಮಾಂಡೆಂಟ್‌ರವರು ಹೊರಡಿಸಿದ ದಿನಾಂಕ: 15.03.2007ರ ಆದೇಶದಂತೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆ ನಿಯಮ, 2001ರ (ಸಂಕ್ಷಿಪ್ತತೆಗಾಗಿ ಸಿ.ಐ.ಎಸ್.ಎಫ್. ನಿಯಮ, 2001) ನಿಯಮ 25(2)ರ ನಿಯಮಗಳ ಅಡಿಯಲ್ಲಿ, ನೋಟೀಸು ಅವಧಿಗೆ ಬದಲಾಗಿ ಒಂದು ತಿಂಗಳ ಸಂಬಳದ ಜೊತೆಗೆ ತಕ್ಷಣ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿದ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ರಿಟ್ ಅರ್ಜಿ ಸಂಖ್ಯೆ: 12480/2010ನ್ನು ಸಲ್ಲಿಸಿದ್ದಾರೆ ಮತ್ತು ಸಿ.ಐ.ಎಸ್.ಎಫ್.ನ ಮಹಾ ನಿರ್ದೇಶಕರು / ಪುನರ್ ಪರಿಶೀಲನಾ ಪ್ರಾಧಿಕಾರಿಯು (2ನೇ ಪ್ರತ್ಯರ್ಜಿದಾರ) ದಿನಾಂಕ: 15.03.2007ರ ಆದೇಶವನ್ನು ದಿನಾಂಕ: 18.06.2018ರ ಆದೇಶದ ಮೂಲಕ ದೃಢೀಕರಿಸಿದ್ದಾರೆ. ರಿಟ್ ನ್ಯಾಯಾಲಯವು ದಿನಾಂಕ 23.07.2013ರ ಪ್ರಶ್ನಿತ ಆದೇಶದ ಮೂಲಕ ರಿಟ್ ಅರ್ಜಿಯನ್ನು ತಿರಸ್ಕರಿಸಿ, 4ನೇ ಪ್ರತ್ಯರ್ಜಿದಾರರ ದಿನಾಂಕ: 15.03.2007ರ ಬಿಡುಗಡೆ ಆದೇಶ ಮತ್ತು 2ನೇ ಪ್ರತ್ಯರ್ಜಿದಾರರ ದಿನಾಂಕ: 18.06.2008ರ ಆದೇಶವನ್ನು ದೃಢೀಕರಿಸಿದೆ.

ರಿಟ್ ನ್ಯಾಯಾಲಯವು, ದಿನಾಂಕ: 15.03.2007ರ ಬಿಡುಗಡೆ ಆದೇಶವು ಸಿ.ಐ.ಎಸ್.ಎಫ್.ನ ನಿಯಮ 2001ಕ್ಕೆ ವಿರುದ್ಧವಾಗಿದೆಯೇ ಮತ್ತು 4ನೇ ಪ್ರತ್ಯರ್ಜಿದಾರರು ಅಪೀಲುದಾರ/ಅರ್ಜಿದಾರರನ್ನು ವಿಚಾರಣೆ ನಡೆಸದೆ ಬಿಡುಗಡೆಗೊಳಿಸಿದ್ದಾರೆಯೇ ಎಂಬ ಪ್ರಶ್ನೆಗಳನ್ನು ಪರಿಗಣಿಸುವಾಗ ಪುನರ್ ಪರಿಶೀಲನಾ ಪ್ರಾಧಿಕಾರಿಯು, ತಮ್ಮ ದಿನಾಂಕ 18.07.2008ರ ಆದೇಶದ ಮೂಲಕ ದೃಢಪಡಿಸಿರುವ ದಿನಾಂಕ: 15.03.2007ರ ಆದೇಶವು 'ಸರಳವಾಗಿ ಬಿಡುಗಡೆಗೊಳಿಸಲಾಗಿತ್ತೇ' ಅಥವಾ 'ಕಳಂಕದಿಂದ ಬಿಡುಗಡೆಗೊಳಿಸಲಾಗಿತ್ತೇ' ಎಂದೂ ಸಹ ವಿಚಾರಣೆ ನಡೆಸಿದೆ. ರಿಟ್ ನ್ಯಾಯಾಲಯವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಬೇರೆ ಬೇರೆ ನಿರ್ಣಯಗಳಲ್ಲಿ ಉಲ್ಲೇಖಿಸಲಾದ ಸಿ.ಐ.ಎಸ್.ಎಫ್. ನಿಯಮಗಳು, 2001ರ 25 ಮತ್ತು 26ನೇ ನಿಯಮದ ಉಪಬಂಧಗಳನ್ನು

ವಿಶ್ಲೇಷಿಸಿದೆ. ಇವುಗಳ ಜೊತೆಗೆ ಭಾರತ ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ಪುನರ್ ಪರಿಶೀಲನೆಯ ವ್ಯಾಪ್ತಿಗೆ ಸಂಬಂಧಿಸಿದಂತೆ 'ಸರಳವಾದ ಬಿಡುಗಡೆ'ಗೆ ಪ್ರತಿಯಾಗಿ ಕಳಂಕದಿಂದ ಬಿಡುಗಡೆಯನ್ನು ಹೇಗೆ ರೂಪಿಸಿದೆ, ಇವುಗಳ ನಡುವಿನ ವ್ಯತ್ಯಾಸ ಮತ್ತು ಪ್ರಾಮುಖ್ಯತೆಯನ್ನು ವಿಶ್ಲೇಷಿಸಿದೆ. ಮುಂದುವರೆದು, 'ಸರಳ ಬಿಡುಗಡೆಗಾಗಿ ರೂಪಿಸಿದ ಬಿಡುಗಡೆಯ ಆದೇಶವನ್ನು ಹೊರಡಿಸುವಲ್ಲಿನ ಕಾರಣ ಮತ್ತು ಪ್ರೇರಣೆ ಹಾಗೂ ಆದೇಶದ ಸೂಕ್ತತೆ ಮತ್ತು ಹೊರಡಿಸಿರುವುದನ್ನು ಸ್ಪಷ್ಟಪಡಿಸುವ ಸಂಬಂಧ ನೌಕರರ ಕಾರ್ಯ ನಿರ್ವಹಣೆಯ ಮೌಲ್ಯಮಾಪನದ ಪರಿಣಾಮವನ್ನು ಸೂಕ್ತವಾಗಿ ವಿಚಾರಿಸಿ ರಿಟ್ ನ್ಯಾಯಾಲಯವು ಖಚಿತಪಡಿಸಿಕೊಂಡಿದೆ. ಈ ವಿಶ್ಲೇಷಣೆ ಮತ್ತು ಉಲ್ಲೇಖಿತ ವಿಷಯದಿಂದ, ರಿಟ್ ನ್ಯಾಯಾಲಯವು, ಪ್ರತ್ಯರ್ಜಿದಾರರು ದಿನಾಂಕ: 15.03.2007ರ ಬಿಡುಗಡೆ ಆದೇಶವನ್ನು ಹೊರಡಿಸುವ ಮುನ್ನ ಯಾವುದೇ ವಿಚಾರಣೆಯನ್ನು ನಡೆಸುವ ಅನಿವಾರ್ಯತೆಯೂ ಕಾನೂನಿನಲ್ಲಿ ಕಂಡುಬಂದಿಲ್ಲವೆಂಬ ನಿರ್ಣಯಕ್ಕೆ ಬಂದಿದೆ.

ಅಪೀಲುದಾರನ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿ ಶ್ರೀ ಎಂ.ಆರ್. ರಾಜಗೋಪಾಲ್‌ರವರು ಸಂಗತಿಗಳನ್ನು ನಿರೂಪಿಸಿ ಅಪೀಲನ್ನು ಬೆಂಬಲಿಸಿ ವಾದಿಸುತ್ತಾ, ಇಲ್ಲಿ ಇನ್ನು ಮುಂದೆ ರೂಪಿಸಲಾದಂತೆ ಸಂಗತಿಗಳನ್ನು ಮೊದಲನೆಯದಾಗಿ ವಿಸ್ತರಿಸಿದ್ದಾರೆ. ಸದರಿ ಅಪೀಲುದಾರರು/ಅರ್ಜಿದಾರರನ್ನು ದಿನಾಂಕ: 19.04.2003ರಿಂದ (ನೇಮಕವಾದ ದಿನಾಂಕ) ಪ್ರಾರಂಭವಾಗುವ ಎರಡು ವರ್ಷದ ಅವಧಿಗೆ ಪ್ರಾರಂಭಿಕ ಪ್ರೊಬೇಷನರಿ ಅವಧಿ ಆಗಿರುತ್ತದೆ ಮತ್ತು ಪ್ರೊಬೇಷನರಿ ಅವಧಿಯನ್ನು 3 ಬಾರಿ ತಲಾ ಆರು ತಿಂಗಳುಗಳ ಕಾಲ ಅಂದರೆ ದಿನಾಂಕ: 18.04.2005ರಿಂದ 17.10.2005, ದಿನಾಂಕ: 18.10.2006 ರಿಂದ 17.04.2006 ಮತ್ತು ದಿನಾಂಕ: 18.04.2006ರಿಂದ 17.10.2006ರ ವರೆಗೆ ವಿಸ್ತರಿಸಲಾಗಿದೆ ಮತ್ತು ಅಪೀಲುದಾರರು/ಅರ್ಜಿದಾರರು ಮೇಲಿಂದ ಮೇಲೆ ಗೈರು ಹಾಜರಾಗಿರುವ ಸಂಬಂಧ ರಜೆಯನ್ನು ಆಗಾಗ ಉಪಯೋಗಿಸಿಕೊಂಡಿದ್ದಾರೆ. ಸಹಾಯಕ ಕಮಾಂಡೆಂಟ್, ಸಿ.ಐ.ಎಸ್.ಎಫ್. ಘಟಕ, ಎನ್.ಎ.ಎಲ್.ಸಿ.ಒ. ಅಂಗುಲ್ (ಒರಿಸ್ಸಾ) ಇವರು ದಿನಾಂಕ: 03.01.2017ರಲ್ಲಿ ಹೊರಡಿಸಿದ ತಿಳುವಳಿಕೆ ಪತ್ರದ ಪ್ರಕಾರ ಅಪೀಲುದಾರರು/

ಅರ್ಜಿದಾರರು ಎರಡು ತಿಂಗಳುಗಳ 'ವೈದ್ಯಕೀಯ ವಿಶ್ರಾಂತಿ' ಕೋರಿ ಸಲ್ಲಿಸಿದ ದಿನಾಂಕ: 03.01.2007ರ ಅರ್ಜಿಗೆ ಅನುಮತಿಯನ್ನು ನೀಡಿರುತ್ತಾರೆ ಮತ್ತು ಎರಡು ತಿಂಗಳ ವೈದ್ಯಕೀಯ ವಿಶ್ರಾಂತಿ ರಜೆಯನ್ನು ಸಲ್ಲಿಸಲು ವೈದ್ಯಕೀಯ ಅರ್ಹತಾ ಪ್ರಮಾಣಪತ್ರ ಮತ್ತು ಇತರ ದಾಖಲೆ ಪತ್ರಗಳ ಜೊತೆಗೆ ಘಟಕಕ್ಕೆ 3.3.2007ಕ್ಕೆ ಮರಳಿ ಬಂದು ವರದಿ ಮಾಡಿಕೊಳ್ಳಲು ಹಾಗೂ ಕಾಯಿಲೆ/ವಿಶ್ರಾಂತಿಯನ್ನು ನಿಯತಗೊಳಿಸುವ ಇತರ ದಾಖಲೆಗಳನ್ನು ತರಲು ಸೂಚಿಸಿರುತ್ತಾರೆ. ಆದಾಗ್ಯೂ, ಅಪೀಲುದಾರರು/ಅರ್ಜಿದಾರರು ಟೆಲಿಗ್ರಾಮ್ ಮೂಲಕ ರಜೆ ವಿಸ್ತರಣೆಯನ್ನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು, ಸಿ.ಐ.ಎಸ್.ಎಫ್. ಘಟಕ, ಎನ್.ಎ.ಎಲ್.ಸಿ.ಒ. ಅಂಗುಲ್‌ನ ಉಪ–ಕಮಾಂಡೆಂಟ್‌ರವರು ದಿನಾಂಕ: 6.3.2007ರಂದು ಮಾಹಿತಿ ನೀಡಿ ಮನವಿಯನ್ನು ತಿರಸ್ಕರಿಸಿದ್ದು, ಸದರಿ ಅರ್ಜಿದಾರ/ಅಪೀಲುದಾರರನ್ನು ತಕ್ಷಣ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತಾರೆ.

ತರುವಾಯ, ಅರ್ಜಿದಾರರು ಸಕ್ಷಮ ಪ್ರಾಧಿಕಾರದ ಅನುಮತಿಯನ್ನು ಪಡೆಯದೆ 'ಒಎಸ್ಎಲ್' ನಲ್ಲಿ ಇದ್ದು, ಅವರು ತಮ್ಮ ಅರ್ಹತಾ ಪ್ರಮಾಣಪತ್ರಗಳೊಂದಿಗೆ ಘಟಕಕ್ಕೆ ಬಂದು ವರದಿ ಮಾಡಿಕೊಳ್ಳಬೇಕೆಂದು ಉಪ ಕಮಾಂಡೆಂಟ್, ಸಿ.ಐ.ಎಸ್.ಎಫ್. ಘಟಕ, ಎನ್.ಎ.ಎಲ್.ಸಿ.ಒ. ಅಂಗುಲ್ ಇವರು ದಿನಾಂಕ: 15.3.2007ರ ತಿಳುವಳಿಕೆ ಪತ್ರವನ್ನು ಹೊರಡಿಸುವ ಮೂಲಕ ತಿಳಿಸಿರುತ್ತಾರೆ; ಇಲ್ಲವಾದಲ್ಲಿ ಅವರ ವಿರುದ್ಧ ಕಠಿಣ ಕ್ರಮವನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. ಆದಾಗ್ಯೂ, ಸಿ.ಐ.ಎಸ್.ಎಫ್.ನ ಹಿರಿಯ ಕಮಾಂಡೆಂಟ್‌ರವರು (4ನೇ ಪ್ರತ್ಯರ್ಜಿದಾರ) ದಿನಾಂಕ: 15.3.2007ರ ಪಶ್ನಿತ ಆದೇಶವನ್ನು ಹೊರಡಿಸಿ ಅಪೀಲುದಾರರು/ಅರ್ಜಿದಾರರು ಸೇವೆಗೆ ಹಿಂದಿರುಗಲು ಅನರ್ಹರು ಮತ್ತು ಅವಧಿಯ ಬದಲಾಗಿ, ಒಂದು ತಿಂಗಳ ಸಂಬಳದೊಂದಿಗೆ ಸಿ.ಐ.ಎಸ್.ಎಫ್.ನ ನಿಯಮ 2001ರ 25(2)ರ ಅಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಅರ್ಜಿದಾರರ ಪರ ವಾದ ಮಂಡಿಸಿದ ಮಾನ್ಯ ನ್ಯಾಯವಾದಿಯು, ಸಂಗತಿಗಳ ಕಾಲಾನುಕ್ರಮಕ್ಕೆ ಒತ್ತುಕೊಟ್ಟು, ಈ ಕೆಳಗಿನ ಅಂಶಗಳನ್ನು ಮಂಡಿಸಿದ್ದಾರೆ.

(ಎ) ಸಿ.ಐ.ಎಸ್.ಎಫ್.ನ ನಿಯಮ 2001ರ 25(1)ರ ನಿಯಮದ ಎರಡನೇ ಪರಂತುಕವು ಪ್ರೊಬೇಷನರಿ ಅವಧಿಯನ್ನು ಕೇವಲ ಎರಡು ಸಂದರ್ಭದಲ್ಲಿ ಮಾತ್ರ ವಿಸ್ತರಿಸಬಹುದು ಎಂಬುದನ್ನು ಉಪಬಂಧಿಸುತ್ತದೆ ಮತ್ತು ನೇಮಕಾತಿ ನಿಯಮದಲ್ಲಿ ನಿಯಮಿಸಲಾದ ಗರಿಷ್ಠ ಎರಡರಷ್ಟು ಪ್ರೊಬೇಷನರಿ ಅವಧಿಗೆ ಒಳಪಡುತ್ತದೆ ಮತ್ತು ಎರಡು ಬಾರಿ ವಿಸ್ತರಿಸಿದ ಪ್ರೊಬೇಷನರಿ ಅವಧಿಯು ಮುಕ್ತಾಯವಾದ ಮೇಲೆ ಮತ್ತು ಪ್ರೊಬೇಷನ್‌ನ ಅವಧಿ ವಿಸ್ತರಿಸಿದ ಗರಿಷ್ಠ ಅವಧಿ ಮುಕ್ತಾಯವಾಗದಿದ್ದರೂ ಕೂಡ, ಸೇವೆಯನ್ನು ದೃಢೀಕರಿಸಿದೆಯೆಂದು ಭಾವಿಸತಕ್ಕದ್ದು; ಆದುದರಿಂದ, ಅಪೀಲುದಾರರು/ಅರ್ಜಿದಾರರು ಪ್ರೊಬೇಷನರಿ ಅವಧಿಯಲ್ಲಿದ್ದು ಮತ್ತು ಅಪೀಲುದಾರ/ಅರ್ಜಿದಾರನನ್ನು ವಿಚಾರಣೆ ನಡೆಸದೆ ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ ಎನ್ನುವ ಆಧಾರದ ಮೇಲೆ 4ನೇ ಪ್ರತ್ಯರ್ಜಿದಾರನಿಗೆ (ಸಿ.ಐ.ಎಸ್.ಎಫ್.ನ ಹಿರಿಯ ಕಮಾಂಡೆಂಟ್) ಸಿ.ಐ.ಪಿ.ಎಸ್.ನ ನಿಯಮ 2001ರ (ಸೂಕ್ತವಲ್ಲದ ಕಾರಣಗಳಿಲ್ಲದೆ ಬಿಡುಗಡೆಯನ್ನು ಉಪಬಂಧಿಸಿರುವ) ನಿಯಮ 25(2)ರ ನೆರವಿನ ಅಗತ್ಯವಿರಲಿಲ್ಲ ಎಂದು ವಾದಿಸಿದ್ದಾರೆ.

(ಬಿ) ಸೇವೆಯ ಭಾವಿತ ದೃಢೀಕರಣದ ದೃಷ್ಟಿಯಿಂದ, ಅಪೀಲುದಾರ/ಅರ್ಜಿದಾರರನ್ನು ಸೇವೆಯಿಂದ ಬಿಡುಗಡೆಗೊಳಿಸಿದ್ದನ್ನು ಪ್ರತ್ಯರ್ಜಿದಾರರು ಸಮರ್ಥಿಸಿಕೊಂಡರೂ ಸಹ, ಸಿ.ಐ.ಎಸ್.ಎಫ್.ನ ನಿಯಮಗಳ 26ನೇ ನಿಯಮದ ಉಪಬಂಧಗಳಿಗೆ ಅನುಸಾರವಾಗಿ ವಿಚಾರಣೆ ನಡೆಸಿದ ನಂತರವಷ್ಟೆ ಮಾಡಬಹುದು.

(ಸಿ) ಸಿ.ಐ.ಎಸ್.ಎಫ್. ಘಟಕದ ಉಪ ಕಮಾಂಡೆಂಟ್‌ರವರು ದಿನಾಂಕ: 15.3.2007ರಂದು ಏಕಕಾಲದಲ್ಲಿ ಪ್ರಕಟಿಸಿದ ತಿಳುವಳಿಕೆ ಪತ್ರದಲ್ಲಿ ಅಪೀಲುದಾರರು/ಅರ್ಜಿದಾರರು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಪ್ರಸ್ತಾಪಿಸಿದ್ದು ಮತ್ತು ಸಿ.ಐ.ಎಸ್.ಎಫ್.ನ ಹಿರಿಯ ಕಮಾಂಡೆಂಟ್‌ರವರು (4ನೇ ಪ್ರತ್ಯರ್ಜಿದಾರ) ದಿನಾಂಕ: 15.3.2007ರಂದು ಹೊರಡಿಸಿದ ಪ್ರಶ್ನಿತ ಆದೇಶವು ಪ್ರತ್ಯರ್ಜಿದಾರರು ಸಿ.ಐ.ಎಸ್.ಎಫ್. ನಿಯಮದ 26ನೇ ನಿಯಮದ ಮೇರೆಗಿನ ಇಲಾಖಾ ವ್ಯವಹರಣೆಗಳನ್ನು ಪ್ರಾರಂಭಿಸಲು ಪ್ರಸ್ತಾವಿಸಿದೆಯೆಂದು, ಆದರೆ, ತದನಂತರ ಪ್ರಕಟವಾದ ದಿನಾಂಕ: 15.3.2007ರ ಸಿ.ಐ.ಎಫ್.ಎಸ್.ನ ನಿಯಮ 2001ರ 26ನೇ ನಿಯಮದ ಆಕ್ಷೇಪಣಾ ಆದೇಶದಲ್ಲಿ, ಅಪೀಲುದಾರರು/ಅರ್ಜಿದಾರನು ಸಿ.ಐ.ಎಸ್.ಎಫ್. ನಿಯಮಗಳು 2001ರ 26ನೇ ನಿಯಮದ ಮೇರೆಗಿನ ವ್ಯವಹರಣೆಗೆ ಒಳಪಡಿಸುವ ಬದಲಾಗಿ ಸರಳವಾಗಿ ಬಿಡುಗಡೆಗೊಳಿಸಿದ್ದರೆ ಹೇಗೋ ಹಾಗೆ ಬಿಡುಗಡೆ ಗೊಳಿಸಲಾಗಿದೆಯೆಂದು ತಿಳಿಸಿರುತ್ತಾರೆ.

(ಡಿ) ಅಪೀಲುದಾರ/ಅರ್ಜಿದಾರರನ್ನು ಅನಧಿಕೃತ ಗೈರುಹಾಜರಿಯ ಆರೋಪದ ಮೇಲೆ, ವಿಚಾರಣೆಯನ್ನು ನಡೆಸದೆ ಸೇವೆಯಿಂದ ವಿಮುಕ್ತಗೊಳಿಸುವುದು ಪ್ರತ್ಯರ್ಜಿದಾರರ ನಿಜವಾದ ಉದ್ದೇಶ/ಇಂಗಿತ ಮತ್ತು ದಿನಾಂಕ: 15.3.2007ರ ಪ್ರಶ್ನಿತ ಆದೇಶವು ಈ ಉದ್ದೇಶದಿಂದಲೇ ಕೂಡಿದೆಯೆಂದು ಕಂಡುಬಂದಿದ್ದು, ಆದುದರಿಂದ ದಿನಾಂಕ: 15.3.2007ರ ಪ್ರಶ್ನಿತ ಆದೇಶವು ಸರಳ ಬಿಡುಗಡೆ ಆಗಿರುವುದಿಲ್ಲ.

(ಇ) ಪುನರ್ ಪರಿಶೀಲನಾ ಪ್ರಾಧಿಕಾರವು ದಿನಾಂಕ: 18.6.2008ರ ಮತ್ತೊಂದು ಪ್ರಶ್ನಿತ ಆದೇಶವನ್ನು ವಿವೇಚನೆ ಬಳಸದೆ ಯಾಂತ್ರಿಕವಾಗಿ

ನೀಡಿದೆ ಮತ್ತು ರಿಟ್ ನ್ಯಾಯಾಲಯವು ಕೂಡ ಅರ್ಜಿದಾರನ ವಾದವನ್ನು ಸಮರ್ಪಕವಾಗಿ ಗ್ರಹಿಸಿ ಮೌಲ್ಯಮಾಪನ ಮಾಡುವಲ್ಲಿ ವಿಫಲವಾಗಿದ್ದು ದೋಷವೆಸಗಿದೆಯೆಂದು ವಾದಿಸಿದ್ದಾರೆ.

ಅಪೀಲುದಾರನ ಪರವಾಗಿ ವಾದಿಸಿರುವ ಮಾನ್ಯ ನ್ಯಾಯವಾದಿಯು ಪ್ರಾಧಿಕಾರಗಳ ಪಟ್ಟಿಗಳನ್ನು ಸಲ್ಲಿಸಿದ್ದಾರೆ. ಆದಾಗ್ಯೂ, ಅವರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ***ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ– ಪಾಲಾಕ್ ಮೋದಿ ಮತ್ತು ಇತರರು***[1] ಪ್ರಕರಣದ ತೀರ್ಪನ್ನು ಮಾತ್ರ ಅವಲಂಬಿತವಾಗಿದ್ದು ಮತ್ತು ಹಿಂದಿನ ತೀರ್ಪುಗಳಾದ ***ಚಂದ್ರ ಪ್ರಕಾಶ ಶಾಹಿ –ವಿರುದ್ಧ– ಸ್ಟೇಟ್ ಆಫ್ ಉತ್ತರ ಪ್ರದೇಶ ಮತ್ತು ಇತರರು***[2] ಪ್ರಕರಣ ಮತ್ತು ನಂತರದ ***ರತ್ನೇಶ್ ಕುಮಾರ್ ಚೌಧರಿ –ವಿರುದ್ಧ– ಇಂದಿರಾ ಗಾಂಧಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಪಾಟ್ನಾ, ಬಿಹಾರ್ ಮತ್ತು ಇತರರು***[3] ಪ್ರಕರಣದಲ್ಲಿನ ಆದೇಶದ ಅನುಪಾತವನ್ನು ಮಾತ್ರ ಪರಿಗಣಿಸಿದೆ ಮತ್ತು ಅಪೀಲುದಾರ/ಅರ್ಜಿದಾರರನ್ನು ಔಪಚಾರಿಕ ವಿಚಾರಣೆಯನ್ನೂ ನಡೆಸದೆ ದುರ್ನಡತೆಯ ಆಪಾದನೆಗಳ ಕಾರಣದಿಂದ ನೌಕರನನ್ನು ಸೇವೆಯಿಂದ ಬಿಡುಗಡೆಗೊಳಿಸುವ ಉದ್ದೇಶವಿದೆ ಎಂಬುದು ಬಿಡುಗಡೆ ಆದೇಶದಲ್ಲಿ ಕಂಡುಬಂದಲ್ಲಿ ಆಗ, ಸರಳ ಬಿಡುಗಡೆಯೆಂದು ರೂಪಿಸಲಾದಂಥ ಆದೇಶವನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ. ಮಾನ್ಯ ನ್ಯಾಯವಾದಿಯು ಮುಂದುವರಿಸಿದ ವಾದವೇನೆಂದರೆ, ಈ ಕಾನೂನು ಪ್ರತಿಪಾದನೆಯು ಪ್ರಕರಣದ ವಸ್ತುಸ್ಥಿತಿ ಮತ್ತು ಸನ್ನಿವೇಶಗಳಿಗೆ ನೇರವಾಗಿ ಅನ್ವಯಿಸುತ್ತದೆ ಮತ್ತು ಅಂತಹ ಪ್ರಶ್ನಿತ ಬಿಡುಗಡೆ ಆದೇಶವು ಕಾನೂನಿನ ಪ್ರಕಾರ ಸಮರ್ಥನೀಯವಾಗಿರುವುದಿಲ್ಲ ಎಂದು ವಾದಿಸಿದ್ದಾರೆ.

ಮತ್ತೊಂದು ಕಡೆ ಎದುರುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಬಿ. ಕಣವಿಯವರು ತಮ್ಮ ವಾದವನ್ನು ಮಂಡಿಸುತ್ತಾ, ರಿಟ್ ನ್ಯಾಯಾಲಯವು ಸಿ.ಐ.ಎಸ್.ಎಫ್. ನಿಯಮವನ್ನೂ ವಿವರವಾಗಿ ವಿಶ್ಲೇಷಿಸಿದ

1. (2013) 3 ಎಸ್‌ಸಿಸಿ 607
2. (2000) 5 ಎಸ್‌ಸಿಸಿ 152
3. (2015) 15 ಎಸ್‌ಸಿಸಿ 151

ನಂತರ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂಬಂಧಪಟ್ಟ ತೀರ್ಪುಗಳನ್ನು ಉಲ್ಲೇಖಿಸಿದ ನಂತರ, ಅಪೀಲುದಾರನ ಪರವಾಗಿ ಮಂಡಿಸಿದ ವಾದಗಳನ್ನು ಅಂಗೀಕರಿಸುವುದಾದರೆ, ಸಿ.ಐ.ಎಸ್.ಎಫ್.ನ ನಿಯಮ 2001ರ 25ನೇ ನಿಯಮದ ಉಪಬಂಧಗಳು ನಿರುಪಯುಕ್ತವಾಗುತ್ತವೆ ಎಂಬ ಸರಿಯಾದ ತೀರ್ಮಾನಕ್ಕೇ ಬಂದಿದೆ ಎಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಮುಂದುವರೆದು, ಮಾನ್ಯ ನ್ಯಾಯವಾದಿಗಳು ತಮ್ಮ ವಾದವನ್ನು ಮಂಡಿಸುತ್ತಾ, 4ನೇ ಪ್ರತ್ಯರ್ಜಿದಾರರು ದಿನಾಂಕ: 15.3.2015ರಲ್ಲಿ ಪ್ರಶ್ನಿತ ಆದೇಶವನ್ನು ಹೊರಡಿಸಿದ್ದು ಮತ್ತು ಅದರ ಮೇರೆಗೆ ಪ್ರೊಬೇಷನರಿ ಅವಧಿಯಲ್ಲಿದ್ದ ಸದರಿ ಅಪೀಲುದಾರ/ಅರ್ಜಿದಾರರನ್ನು ಸೇವೆಯಲ್ಲಿ ಮುಂದುವರೆಯಲು ಸೂಕ್ತನಲ್ಲವೆಂಬ ಆಧಾರದ ಮೇಲೆ ಸೇವೆಯಿಂದ ಸರಳ ಬಿಡುಗಡೆಗೊಳಿಸಿರುತ್ತಾರೆ.

ಎದುರು ವಾದವನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಅಂತರ–ನ್ಯಾಯಾಲಯದಲ್ಲಿ ಪರ್ಯಾಲೋಚನೆಗೆ ಉದ್ಭವವಾಗುವ ಪ್ರಶ್ನೆಗಳೆಂದರೆ, ಅರ್ಜಿದಾರರು ಭಾವಿತ ದೃಢೀಕರಣದ ಅನುಕೂಲತೆಯನ್ನು ಪಡೆಯಲು ಮತ್ತು ಅದರಿಂದ ಉದ್ಭವಿಸುವ ತತ್ಫಲವಾದ ಪರಿಣಾಮವನ್ನು ಪಡೆಯಲು ಹಕ್ಕುಳ್ಳವರಾಗಿರುವರೇ ಮತ್ತು ಅರ್ಜಿದಾರರು, ದಿನಾಂಕ: 23.7.2013ರ ರಿಟ್ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 12480/2010ರಲ್ಲಿನ ಆದೇಶದ ಮೇಲೆ ಮಧ್ಯಪ್ರವೇಶಿಸಿರುವುದರ ಸಂಬಂಧ ಯಾವುದೇ ಆಧಾರ ನೀಡಲಾಗಿದೆಯೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ಸಂಬಂಧಪಟ್ಟ ನಿಯಮದ ಅಡಿಯಲ್ಲಿ ನಿಯಮಿಸಲಾದ ಪ್ರೊಬೇಷನರಿ ಅವಧಿಯು ಎರಡು ವರ್ಷಗಳದ್ದಾಗಿರುತ್ತದೆ ಎಂಬುದರ ಬಗ್ಗೆ ಯಾವುದೇ ವಿವಾದವಿರುವುದಿಲ್ಲ; ಅಪೀಲುದಾರ/ಅರ್ಜಿದಾರರ ನೇಮಕಾತಿಯು 19.4.2003ರಂದು ಆಗಿದ್ದು (ನೇಮಕಾತಿಯ ದಿನಾಂಕ) ಅದಾದ ಎರಡು ವರ್ಷಕ್ಕೆ ಅಂದರೆ ದಿನಾಂಕ: 17.4.2005ರಂದು ಅವರ ಪ್ರಾಥಮಿಕ ಪ್ರೊಬೇಷನರಿ ಅವಧಿಯು ಮುಕ್ತಾಯಗೊಂಡ ನಂತರ ಅವರ ಪ್ರೊಬೇಷನರಿ ಅವಧಿಯನ್ನು ತಲಾ ಆರು ತಿಂಗಳಂತೆ ಮೂರು

ಬಾರಿ ಅಂದರೆ ದಿನಾಂಕ: 18.4.2005 ರಿಂದ 17.10.2006ರ ವರೆಗೆ ಮಂಜೂರು ಮಾಡಲಾಗಿತ್ತು; ಮತ್ತು ಪ್ರೋಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದ ದೃಢೀಕರಣದ ಅಥವಾ ಪೋಷಣೆಯ ಯಾವುದೇ ಆದೇಶ ಇರಲಿಲ್ಲ ಮತ್ತು ಅಪೀಲುದಾರ/ಅರ್ಜಿದಾರರ ಪ್ರೊಬೇಷನರಿ ಅವಧಿಯ ಗರಿಷ್ಠ ಕಾಲಾವಧಿಯು, (ಸಿ.ಐ.ಎಸ್.ಎಫ್. 2001ರ ನಿಯಮಗಳ 25(1)ನೇ ನಿಯಮದ ಎರಡನೇ ಪರಂತುಕ) ಸಾಮಾನ್ಯವಾಗಿ ದಿನಾಂಕ: 17.4.2007ಕ್ಕೆ ಮುಕ್ತಾಯಗೊಳ್ಳುತ್ತದೆ. ಆದಾಗ್ಯೂ, ಸೇವೆ ಖಾಯಂಗೊಳಿಸುವ ನಿರ್ದಿಷ್ಟ ಆದೇಶ ಅಥವಾ ಪ್ರೊಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಮುಕ್ತಾಯಗೊಳಿಸಿದ ಪ್ರಕಟಣೆಯ ಅನುಪಸ್ಥಿತಿಯಲ್ಲಿ ಅಪೀಲುದಾರ/ಅರ್ಜಿದಾರರು ಭಾವಿತ ದೃಢೀಕರಣದ ಪ್ರಯೋಜನವನ್ನು ಪಡೆಯಲು ಅರ್ಹರಿರುವರೆ ಎಂಬುದು ವಾದವಾಗಿರುತ್ತದೆ ಮತ್ತು ಸಿ.ಐ.ಎಸ್.ಎಫ್. ನಿಯಮ 2001ರ 25(1) ನಿಯಮ ಎರಡನೇ ಪರಂತುಕವನ್ನು ವಿಧಿಸಿರುವಂತೆ ವಿಧಿಸಿದ್ದರೂ ಸಹ ಎರಡು ಬಾರಿ ಮಾತ್ರ ಪ್ರೊಬೇಷನರಿ ಅವಧಿಯ ವಿಸ್ತರಣೆಯಿರುತ್ತದೆ ಮತ್ತು ವಿಸ್ತರಣೆಯು ನಿಗದಿಪಡಿಸಿದ ಪ್ರೊಬೇಷನರಿ ಅವಧಿಗಿಂತ ಗರಿಷ್ಠ ಎರಡರಷ್ಟು ಅವಧಿಗೆ ಮಾತ್ರ ಒಳಪಟ್ಟಿರುತ್ತದೆ ಮತ್ತು ಅಂತಹ ಎರಡು ವಿಸ್ತರಣೆಯನ್ನೂ ಮೀರಿದ ಯಾವುದೇ ಮುಂದುವರಿಕೆಯನ್ನು ಪ್ರೋಬೇಷನರಿ ಅವಧಿಯ ದೃಢೀಕರಣ ಎಂದು ಭಾವಿಸಲಾಗುತ್ತದೆ.

ಆದ್ದರಿಂದ ಕ್ಲೇಮುದಾರರು ಪ್ರೊಬೇಷನರಿ ಅವಧಿಯನ್ನು ಖಾಯಂಗೊಳಿಸುವ ಪ್ರಯೋಜನಕ್ಕೆ ಹಕ್ಕುಳ್ಳವರಾಗಿರುವರು ಎಂಬ ಪ್ರಶ್ನೆಯು ಪ್ರಶ್ನಿಸಿದ ವ್ಯಕ್ತಿಯು ನೀಡುವ ಉತ್ತರದ ಮೇಲೆ ಅವಲಂಬಿತವಾಗಿದೆ ಮತ್ತು ಸಿ.ಐ.ಎಸ್.ಎಫ್. ನಿಯಮ 2001ರ 25ನೇ ನಿಯಮದ ಉಪಬಂಧಗಳು ಪ್ರೊಬೇಷನರಿ ಅವಧಿಯನ್ನು ಖಾಯಂಗೊಳಿಸಿದೆಯೆಂದು ಭಾವಿಸತಕ್ಕದ್ದು ಎಂಬುದನ್ನು ಉಪಬಂಧಿಸುತ್ತದೆಯೇ ಅಥವಾ ಉದ್ದೇಶಿಸುತ್ತದೆಯೇ ಎಂಬುದನ್ನು ಉಪಬಂಧಿಸುತ್ತದೆ. ಸಿ.ಐ.ಎಸ್.ಎಫ್.ನ 25ನೇ ನಿಯಮ ಈ ಕೆಳಗಿನಂತಿದೆ:

*ನಿಯಮ 25 – ಸೇವಾರ್ಥ ಅವಧಿ ಪ್ರತಿ ನಿಯೋಜಿತ/ ವಿಲೀನಗೊಳಿಸುವಿಕೆಯಲ್ಲಿ ನೇಮಕವಾದವರನ್ನು ಹೊರತುಪಡಿಸಿದ ಭದ್ರತಾ ಪಡೆಯ ಪ್ರತಿಯೊಬ್ಬ ಸದಸ್ಯರು ನೇಮಕಾತಿ ನಿಯಮದಲ್ಲಿನ ಸಂಬಂಧಪಟ್ಟ ಅಂಕಣದಲ್ಲಿ ನಿರ್ದಿಷ್ಟವಾಗಿ ನಿರ್ದಿಷ್ಟಪಡಿಸಲಾದ ಅವಧಿಯುವರೆಗೆ ಪ್ರೊಬೇಷನರಿ ಅವಧಿಯಲ್ಲಿರತಕ್ಕದ್ದು.*

*ಪರಂತು, ಖಾಯಂಗೊಳಿಸುವ ನಿರ್ದಿಷ್ಟ ಆದೇಶ ಇಲ್ಲದಿರುವಾಗ ಅಥವಾ ಪ್ರೊಬೇಷನರಿ ಅವಧಿಯು ತೃಪ್ತಿಕರವಾಗಿ ಪೂರ್ಣಗೊಂಡ ಬಗ್ಗೆ ಘೋಷಣೆ ಇಲ್ಲದಿರುವಾಗ, ಭದ್ರತಾ ಪಡೆಯ ಸದಸ್ಯರು ಪ್ರೊಬೇಷನರಿ ಅವಧಿಯಲ್ಲಿರುವರು ಎಂದು ಭಾವಿಸತಕ್ಕದ್ದು.*

*ಪರಂತು, ಭದ್ರತಾ ಪಡೆಯ ಯಾವುದೇ ಸದಸ್ಯನನ್ನು ಸಾಮಾನ್ಯವಾಗಿ ಆಯಾ ನೇಮಕಾತಿ ನಿಯುಮಗಳಲ್ಲಿ ನಿಯಮಿಸಲಾದ ಅವಧಿಯ ಎರಡರಷ್ಟು ಅವಧಿಯನ್ನೂ ಮೀರಿ ಮಾತ್ರ ಪರಿವೀಕ್ಷಣಾ ಅವಧಿಯಲ್ಲಿ ಇಡತಕ್ಕದ್ದಲ್ಲ.*

*(2) ಆದರೆ ಪ್ರೊಬೇಷನರಿ ಅವಧಿಯಲ್ಲಿ ನೇಮಕಾತಿ ಪ್ರಾಧಿಕಾರವು ದಳದ ಸದಸ್ಯನು ಖಾಯಂ ನೇಮಕಾತಿಗೊಳ್ಳಲು ಸೂಕ್ತರಾಗಿಲ್ಲ ಎಂದು ಅಭಿಪ್ರಾಯಪಟ್ಟಲ್ಲಿ, ಅಂತಹ ಸದಸ್ಯನನ್ನು ನೇಮಕಾತಿ ಪ್ರಾಧಿಕಾರವು, ಒಂದು ತಿಂಗಳ ಅವಧಿಗೆ ನೋಟೀಸ್ ನೀಡಿದ ನಂತರ ಅಥವಾ ನೋಟೀಸಿನ ಬದಲಾಗಿ ಒಂದು ತಿಂಗಳ ಸಂಬಳ ನೀಡಿ ಆದೇಶ ಹೊರಡಿಸುವುದರ ಮೂಲಕ ಬಿಡುಗಡೆಗೊಳಿಸಬಹುದು. (ಸೇವೆಯಿಂದ ಸಮಾಪನ ಗೊಳಿಸಬಹುದು) ಅಥವಾ ಯಾವ ದರ್ಜೆಯಿಂದ ಅವನಿಗೆ ಬಡ್ತಿ ನೀಡಲಾಗಿತ್ತೋ ಆ ದರ್ಜೆಗೆ ಅವನನ್ನು ವಾಪಸ್*

*ಕಳುಹಿಸಬಹುದು ಅಥವಾ ಸಂದರ್ಭಾನುಸಾರ ಅವನ ಮಾತೃ ಇಲಾಖೆಗೆ ಹಿಂದಕ್ಕೆ ಕಳುಹಿಸಬಹುದು.*

*(3) 'ಭದ್ರತಾ ಪಡೆಯ ಸದಸ್ಯನು ಪ್ರೊಬೇಷನರಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ನೇಮಕಾತಿ ಪ್ರಾಧಿಕಾರವು ಭದ್ರತಾ ಪಡೆಯ ಸದಸ್ಯನು ಯಾವ ಶ್ರೇಣಿಗೆ ಸೇರಿದನೋ ಆ ದರ್ಜೆಯನ್ನು ಖಾಯಂಗೊಳಿಸುವ ಆದೇಶವನ್ನು ಹೊರಡಿಸತಕ್ಕದ್ದು.*

ಭದ್ರತಾ ಪಡೆಯ ಅಭ್ಯರ್ಥಿಯು, ಪ್ರತಿನಿಯೋಜನೆ ವಿಲೀನಗೊಳಿಸುವಿಕೆಯಲ್ಲಿ ನೇಮಕವಾದವರನ್ನು ಹೊರತುಪಡಿಸಿ, ನೇಮಕಾತಿ ನಿಯಮದಲ್ಲಿನ ಸಂಬಂಧಪಟ್ಟ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯುವರೆಗೆ ಪ್ರೊಬೇಷನರಿ ಅವಧಿಯಲ್ಲಿರತಕ್ಕದ್ದು ಎಂದು ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಮೊದಲ ಎರಡು ಪರಂತುಕಗಳು ಗೊತ್ತುಪಡಿಸುತ್ತದೆ ಮತ್ತು ಖಾಯಂಗೊಳಿಸಲು ಅಥವಾ ಪ್ರೊಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಮುಕ್ತಾಯಗೊಳಿಸಿದ ದೃಢೀಕರಣ ಅಥವಾ ಘೋಷಿಸಿದ ನಿರ್ದಿಷ್ಟ ಆದೇಶ ಇಲ್ಲದಿರುವಾಗ ಅಂಥ ಪ್ರತಿಯೊಬ್ಬ ಸದಸ್ಯನು ಪ್ರೊಬೇಷನರಿ ಅವಧಿಯಲ್ಲಿಯೇ ಇರುತ್ತಾರೆ ಎಂದು ಭಾವಿಸತಕ್ಕದ್ದು ಎಂದು ಸಿ.ಐ.ಎಸ್.ಎಫ್. ನಿಯಮ 2001ರ ನಿಯಮ 25(1)ರ ಮೊದಲ ಎರಡು ಪರಂತುಕಗಳು ನಿರ್ದಿಷ್ಟವಾಗಿ ವಿಧಿಸುತ್ತವೆ. ಮುಂದುವರೆದು ಭದ್ರತಾ ಪಡೆಯ ಯಾವುದೇ ಸದಸ್ಯನು, ನೇಮಕಾತಿ ನಿಯಮದಲ್ಲಿ ನಿಯಮಿಸಲಾದ ಪ್ರೊಬೇಷನರಿ ಅವಧಿಯ ಎರಡರಷ್ಟು ಅವಧಿಯವರೆಗೆ ಮಾತ್ರ ಸಾಮಾನ್ಯವಾಗಿ ಪ್ರೊಬೇಷನರಿ ಅವಧಿಯಲ್ಲಿ ಉಳಿಸಿಕೊಳ್ಳಬಹುದೇ ಹೊರತು ಅದಕ್ಕೂ ಅಧಿಕ ಅವಧಿಯವರೆಗಲ್ಲಾ ಎಂದು ಎರಡನೇ ಪರಂತುಕವು ವಿಧಿಸುತ್ತದೆ.

ನಿಯಮ 25(1)ರ ಮೊದಲ ಪರಂತುಕದಲ್ಲಿ ವಿಧಿಸಿರುವುದೇನೆಂದರೆ, ಖಾಯಂಗೊಳಿಸುವ ನಿರ್ದಿಷ್ಟ ಆದೇಶ ಅಥವಾ ಪ್ರೊಬೇಷನರಿ ಅವಧಿಯು ತೃಪ್ತಿಕರವಾಗಿ ಮುಕ್ತಾಯಗೊಳಿಸಿದ ಘೋಷಣೆಯನ್ನು ಮಾಡದಿರುವಾಗ ಭದ್ರತಾ

ಪಡೆಯ ಸದಸ್ಯನು ಪ್ರೊಬೇಷನರಿ ಅವಧಿಯಲ್ಲಿರುವರು ಎಂದು ಭಾವಿಸಲಾಗಿದ್ದು, ಸೇವೆ ಖಾಯಂಗೊಳಿಸಲಾಗಿದೆ ಎಂದು ಭಾವಿಸತಕ್ಕದ್ದು ಎಂಬ ಕೋರಿಕೆಯು ನಿರ್ದಿಷ್ಟ ಪ್ರತಿಬಂಧದಂತೆ ಕಾರ್ಯ ನಿರ್ವಹಿಸಬೇಕು ಎಂಬುದಾಗಿದೆ ಮತ್ತು ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಮೊದಲ ಪರಂತುಕ ಮತ್ತು ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಎರಡನೆಯ ಪರಂತುಕದ ಸಂಯೋಜಿತ ಅಧ್ಯಯನದ ನಿಜವಾದ ಅರ್ಥವು ಗೊತ್ತುಪಡಿಸುವುದೇನೆಂದರೆ, ಭದ್ರತಾ ಪಡೆಯ ಯಾವುದೇ ಸದಸ್ಯನನ್ನು ನಿಗದಿಪಡಿಸಿದ ಪ್ರೊಬೇಷನರಿ ಅವಧಿಗಿಂತ ಎರಡರಷ್ಟು ಅವಧಿಯವರೆಗೆ ಸಾಮಾನ್ಯವಾಗಿ ಉಳಿಸಿಕೊಳ್ಳುವಂತಿಲ್ಲ ಅಂದರೆ, ಭದ್ರತಾ ಪಡೆಯ ಸದಸ್ಯನನ್ನು ಅನುಜ್ಞೇಯ ಪ್ರೊಬೇಷನರಿ ಅವಧಿಗೂ ಮೀರಿ ಮುಂದುವರಿಸಿದರೆ (ಸಾಮಾನ್ಯವಾಗಿ ಮಾಡಬಾರದಂತಹ) ಅಂತಹ ಅಭ್ಯರ್ಥಿಯು, ಸೇವೆ ಖಾಯಂಗೊಳಿಸುವ ನಿರ್ದಿಷ್ಟ ಆದೇಶ ಅಥವಾ ಪ್ರೊಬೇಷನರಿ ಅವಧಿಯನ್ನು ತೃಪ್ತಿಕರವಾಗಿ ಮುಕ್ತಾಯಗೊಳಿಸಿದ ಪ್ರಕಟಣೆಯನ್ನು ಹೊರತುಪಡಿಸಿ, ಪ್ರೊಬೇಷನರಿ ಅವಧಿಯಲ್ಲಿದ್ದಾರೆ ಎಂದು ಭಾವಿಸತಕ್ಕದ್ದು. ಆದ್ದರಿಂದ, ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಎರಡನೇ ಉಪಬಂಧದಲ್ಲಿ 'ಸಾಮಾನ್ಯವಾಗಿ' ಅಭಿವ್ಯಕ್ತಗೊಂಡಿರುವುದನ್ನು ರಿಟ್ ನ್ಯಾಯಾಲಯವು 'ಸಜಾತೀಯ' ಎಂದು ಅರ್ಥೈಸುತ್ತದೆ ಎಂಬ ತೀರ್ಪಿಗೆ ಬಂದಿರುತ್ತದೆ, ಇಲ್ಲವಾದರೆ ಪ್ರೊಬೇಷನರಿ ಆದೇಶವು ನಿರುಪಯುಕ್ತ ಅಥವಾ ನಿಷ್ಪ್ರಯೋಜಕ ಮತ್ತು ಈ ನ್ಯಾಯಾಲಯವು ಕೇವಲ ಇಂಥ ತೀರ್ಪನ್ನು ಸಮರ್ಥಗೊಳಿಸುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಮುಖ್ಯೋಪಾಧ್ಯಾಯರು, ಲಾರೆನ್ಸ್ ಸ್ಕೂಲ್ –ವಿರುದ್ಧ– ಜಯಂತಿ ರಘು ಮತ್ತು ಇತರರು (ಮೂರು ನ್ಯಾಯಾಧೀಶರ ಪೀಠದ, ಮಧ್ಯಪ್ರದೇಶ***[4] ***ರಿಜಿಸ್ಟ್ರಾರ್ ಮತ್ತು ಇತರರು –ವಿರುದ್ಧ– ಸತ್ಯ ನಾರಾಯಣ ಜಾವರ್‌ರ*** ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸುತ್ತಾ

4. (2014) 4 ಎಸ್‌ಸಿಸಿ 793

ಪ್ರಕರಣದ ತೀರ್ಪನಲ್ಲಿ ಒತ್ತಿ ಹೇಳುವುದೇನೆಂದರೆ, ಸಂಬಂಧಿತ ನಿಯಮವು ಅಂಥ ಭಾವಿತ ದೃಢೀಕರಣಕ್ಕೆ ಒಪ್ಪಿಗೆ ನೀಡಿದರೆ ಮಾತ್ರ ಪ್ರೊಬೇಷನರಿ ಅವಧಿಯ ದೃಢೀಕರಣವನ್ನು ಭಾವಿಸಬಹುದು ಮತ್ತು ಭಾವಿತ ದೃಢೀಕರಣಕ್ಕೆ ಸಂಬಂಧಪಟ್ಟ ನಿಯಮದಲ್ಲಿ ಯಾವುದೇ ಉಪಬಂಧ ಇಲ್ಲದಿದ್ದರೆ, ಅದರ ಪರಿಣಾಮವಾಗಿ ಪ್ರೊಬೇಷನರಿ ಅವಧಿಯ ಖಾಯಂಗೊಳಿಸುವಿಕೆ ಎಂದು ಭಾವಿಸತಕ್ಕದ್ದು ಎಂದು ಅರ್ಥೈಸಲು ಸಾಧ್ಯವಿಲ್ಲ ಮತ್ತು ಗರಿಷ್ಠ ಪ್ರೊಬೇಷನರಿ ಅವಧಿಯನ್ನು ನಿಯಮದಲ್ಲಿ ನಿರ್ದಿಷ್ಟವಾಗಿ ಗೊತ್ತುಪಡಿಸುವಾಗ ಒತ್ತಿ ಹೇಳುವುದರ ಜೊತೆಗೆ, ಉದ್ಯೋಗದಾರನಿಗೆ, ಖಾಯಂಗೊಳಿಸುವ ಉದ್ದೇಶಕ್ಕಾಗಿ ನಿರ್ದಿಷ್ಟ ಆದೇಶ ಅಥವಾ ಪ್ರತ್ಯೇಕ ಪ್ರಕ್ರಿಯೆಯ ಅಗತ್ಯವಿರುತ್ತದೆ ಮತ್ತು ನಿರ್ದಿಷ್ಟ ಆದೇಶ ಅಥವಾ ನಿರ್ದಿಷ್ಟ ಪ್ರಕ್ರಿಯೆಯು ಸಂಪೂರ್ಣಗೊಳ್ಳದೆ, ಭಾವಿತ ದೃಢೀಕರಣವು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ***ಲಾರೆನ್ಸ್ ಸ್ಕೂಲ್*** (ಮೇಲಿನ) ಪ್ರಕರಣದ ತೀರ್ಪಿನ ಸಂಬಂಧಿತ ಭಾಗವನ್ನು ಈ ಕೆಳಕಂಡಂತೆ ಓದಲಾಗಿದೆ:

> *"15.ನಿಯಮದಲ್ಲಿರುವ ಅರ್ಥ ವಿವರಣೆ ಸರಿಯಿದೆಯೇ ಇಲ್ಲವೇ ಎಂದು ಮೌಲ್ಯಮಾಪನವನ್ನು ಮುಂದುವರೆಸುವ ಮೊದಲು, ಈ ಕ್ಷೇತ್ರದ ಕೆಲವು ಪ್ರಾಧಿಕಾರಗಳನ್ನು ಉಲ್ಲೇಖಿಸುವುದು ಸಮಂಜಸವಾದುದು. ಸುಕುಬನ್ಸ್ ಸಿಂಗ್ –ವಿರುದ್ಧ– ಸ್ಟೇಟ್ ಆಫ್ ಪಂಜಾಬ್ ಪ್ರಕರಣದಲ್ಲಿ ಸಂವಿಧಾನ ಪೀಠವು ಅಭಿಪ್ರಾಯ ಪಡುವುದೇನೆಂದರೆ, ಪ್ರೊಬೇಷನರಿ ಅವಧಿಯಲ್ಲಿರುವ ಅಭ್ಯರ್ಥಿಯು, ಪ್ರೊಬೇಷನರಿ ಅವಧಿಯು ಮುಕ್ತಾಯಗೊಂಡ ನಂತರ, ನೇಮಕವಾದ ನಿಯಮವು ಅಂತಹ ಫಲಿತಾಂಶಕ್ಕೆ ಅಗತ್ಯವಾಗಿ ಒದಗಿಸುವುದನ್ನು ಹೊರತುಪಡಿಸಿ ಆ ನಿಯಮಗಳ ಮೇರೆಗೆ ಸ್ವಯಂಚಾಲಿತವಾಗಿ ಸೇವೆಯ ಖಾಯಂ ಸದಸ್ಯತ್ವದ ಸ್ಥಾನಮಾನವನ್ನು ಪಡೆಯಲಾಗುವುದಿಲ್ಲ.*

*"27. . . . . ಪ್ರಕರಣದ ಕೊನೆಯ ಸಾಲಿನಲ್ಲಿರುವುದೇನೆಂದರೆ, ಗರಿಷ್ಠ ಪ್ರೊಬೇಷನರಿ ಅವಧಿಯು ನಿಯಮಗಳಡಿಯಲ್ಲಿ ನಿರ್ದಿಷ್ಟವಾಗಿ ನಿಯಮಿಸಲಾಗಿದ್ದರೂ ಕೂಡ, ಉದ್ಯೋಗದಾತನ ಕಡೆಯಿಂದ ದೃಢೀಕರಣದ ನಿರ್ದಿಷ್ಟ ಆದೇಶ ಹೊರಡಿಸುವ ಮೂಲಕ ಮತ್ತು ಖಾಯಂಗೊಳಿಸುವ ಉದ್ದೇಶಕ್ಕಾಗಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಶವನ್ನು ಅಗತ್ಯಪಡಿಸುತ್ತದೆ ಎಂದಿರುತ್ತದೆ. ಇಂತಹ ಪ್ರಕರಣದಲ್ಲಿ ಗರಿಷ್ಠ ಪ್ರೊಬೇಷನರಿ ಅವಧಿಯು ಮುಕ್ತಾಯಗೊಂಡಿದ್ದರೂ ಮತ್ತು ಖಾಯಂಗೊಳಿಸುವ ಆದೇಶವನ್ನು ಹೊರಡಿಸಿದ್ದರೂ ಮತ್ತು ವ್ಯಕ್ತಿಯು ಅವಶ್ಯಕವಾದ ಪರೀಕ್ಷೆಯನ್ನೂ ತೆಗೆದುಕೊಂಡಿಲ್ಲವಾದರೂ. ಆತನನ್ನು, ಕೇವಲ ಸದರಿ ಅವಧಿಯು ಮುಕ್ತಾಯಗೊಂಡಿದ್ದರಿಂದ ಮಾತ್ರದಿಂದಲೇ ಸೇವೆಯು ಖಾಯಂಗೊಂಡಂತೆ ಎಂದು ಭಾವಿಸಬಾರದು".*

ಮುಂದುವರೆದು, ಉದ್ದೇಶಿಸಲಾದ ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಪರಂತುಕವು ಹೇಳುವುದೇನೆಂದರೆ, ಪ್ರಾಥಮಿಕ ಪ್ರೊಬೇಷನರಿ ಅವಧಿಯು ಮುಕ್ತಾಯವಾದ ನಂತರ, ವಿಸ್ತರಣೆಯ ಅಧಿಕಾರಾವಧಿಯನ್ನು ಲೆಕ್ಕಿಸದೆ, ಕೇವಲ ಎರಡು ಬಾರಿ ಮಾತ್ರ ಪ್ರೊಬೇಷನರಿ ಅವಧಿಯನ್ನು ವಿಸ್ತರಿಸಬಹುದು. ಆದರೆ ಪ್ರೊಬೇಷನರಿ ಅವಧಿಯು ಗರಿಷ್ಠ ಎರಡರಷ್ಟು ಅವಧಿಗೆ ವಿಸ್ತರಿಸುವುದಕ್ಕೆ ಮಾತ್ರ ಒಳಪಟ್ಟು ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಹೊರಗಿನ ಭಾಷೆಯು ಇದರ ಅರ್ಥವನ್ನು ಒದಗಿಸುತ್ತದೆ ಮತ್ತು ಹಾಗಾಗಿ ಕೃತಕವಾಗಿ ಉಪಬಂಧವನ್ನು ಅರ್ಥೈಸುವುದನ್ನು ಅನುಮತಿಸಲಾಗುವುದಿಲ್ಲ. ಮುಂದುವರೆದು, ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1)ರ ಉಪಬಂಧಗಳು ಮತ್ತು ಅದರ ಪರಂತುಕಗಳು ಪ್ರೊಬೇಷನರಿ ಅವಧಿಯ ಭಾವಿತ ದೃಢೀಕರಣವನ್ನು ಉಪಬಂಧಿಸುವುದಿಲ್ಲ ಮತ್ತು ಅಪೀಲುದಾರ/ಅರ್ಜಿದಾರರು ಪ್ರೊಬೇಷನರಿ ಅವಧಿಯ ಭಾವಿತ ದೃಢೀಕರಣದ ಪ್ರಯೋಜನವನ್ನು ಪಡೆಯಲಾಗುವುದಿಲ್ಲ.

ದಿನಾಂಕ: 13.5.2007ರ ಬಿಡುಗಡೆ ಆದೇಶವು, ಅಪೀಲುದಾರ/ಅರ್ಜಿದಾರರನ್ನು ಅನಧಿಕೃತ ಗೈರುಹಾಜರಿಯ ಸಂಬಂಧ ಸೇವೆಯಿಂದ ವಜಾಗೊಳಿಸುವ ಉದ್ದೇಶ ಹೊಂದಿದೆ ಎಂಬ ಅಂಶವನ್ನು ಪ್ರೇರೇಪಿಸುತ್ತದೆ ಎಂಬುದು ಮುಂದಿನ ವಾದವಾಗಿರುತ್ತದೆ. ಆದ್ದರಿಂದ ದಿನಾಂಕ: 15.3.2007ರ ಪ್ರಶ್ನಿತ ಆದೇಶವು 'ಸರಳ ಬಿಡುಗಡೆ' ಆಗಿರುವುದಿಲ್ಲ ಮತ್ತು ಅದನ್ನು ಉಪ–ಕಮಾಂಡೆಂಟ್, ಸಿ.ಐ.ಎಸ್.ಎಫ್.ನ ಘಟಕ, ಎನ್.ಎ.ಎಲ್.ಸಿ.ಓ. ಅಂಗುಲ್ ಇವರು ಏಕಕಾಲಿಕವಾಗಿ ದಿನಾಂಕ: 15.3.2007ರ ತಿಳುವಳಿಕೆ ಪತ್ರದಲ್ಲಿ ಹೊರಡಿಸಿದ್ದು, ಅಪೀಲುದಾರ/ಅರ್ಜಿದಾರರು ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ 'ಒಎಸ್ಎಲ್' ನಲ್ಲಿದ್ದರು ಮತ್ತು ಅವರು ಈ ಕೂಡಲೇ ಅರ್ಹತಾ ಪ್ರಮಾಣಪತ್ರಗಳೊಂದಿಗೆ ಘಟಕಕ್ಕೆ ವರದಿ ಮಾಡಿಕೊಳ್ಳಬೇಕು, ಇಲ್ಲವಾದಲ್ಲಿ ಅವರ ಮೇಲೆ ಕಟ್ಟುನಿಟ್ಟಿನ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗುವುದು ಎಂದಿರುತ್ತದೆ ಮತ್ತು ಸಿ.ಐ.ಎಸ್.ಎಫ್.ನ ಹಿರಿಯ ಕಮಾಂಡೆಂಟ್ (4ನೇ ಪ್ರತ್ಯರ್ಜಿದಾರ) ಹೊರಡಿಸಿದ ಪ್ರಶ್ನಿತ ಆದೇಶ ದಿನಾಂಕ 15.3.2007ರಲ್ಲಿ ತಿಳಿಯಪಡಿಸುವುದೇನೆಂದರೆ, ಸದರಿ ಅರ್ಜಿದಾರರು/ಅಪೀಲುದಾರರು ಸೇವೆಗೆ ಹಿಂದಿರುಗಲು ಅರ್ಹರಾಗಿಲ್ಲ ಮತ್ತು ಸಿ.ಐ.ಎಸ್.ಎಫ್.ನ ನಿಯಮ 2001ರ ನಿಯಮ 25(1) ಅಡಿಯಲ್ಲಿ ನೋಟೀಸ್ ಅವಧಿಯ ಬದಲಿಗೆ ಒಂದು ತಿಂಗಳ ಸಂಬಳದೊಂದಿಗೆ ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಲಾಗಿದೆ ಎಂಬುದನ್ನು ತಿಳಿಸುತ್ತದೆ. ಈ ಎರಡೂ ಆದೇಶವನ್ನು ಏಕಕಾಲದಲ್ಲಿ ಹೊರಡಿಸಲಾಗಿರುತ್ತದೆ.

ರಿಟ್ ನ್ಯಾಯಾಲಯವು, ***ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಇತರರು –ವಿರುದ್ಧ – ಪಾಲಾಕ್ ಮೋದಿ ಮತ್ತು ಇತರರು***[5] (ನಿರ್ದಿಷ್ಟ ಮೌಲ್ಯನಿರ್ಧರಣ ಪದ್ಧತಿಯ ನಂತರ ನೌಕರನು ಸೇವೆಯಲ್ಲಿ ಮುಂದುವರೆಯಲು ಅರ್ಹರು ಎಂದರೆ ಬಿಡುಗಡೆಗೊಳಿಸುವ ಆದೇಶವು ದಂಡನಾತ್ಮಕ ಎಂದು ತೀರ್ಮಾನಿಸಲಾಗುವುದಿಲ್ಲ.) ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸಂದರ್ಭದಲ್ಲಿ ದಿನಾಂಕ: 15.3.2016ರ ಪ್ರಶ್ನಿತ ಆದೇಶವು 'ಸರಳ ಬಿಡುಗಡೆ' ಅಥವಾ 'ಕಳಂಕಿತ

5. (2001) 7 ಎಸ್‌ಸಿಸಿ 161

ಬಿಡುಗಡೆ' ಆಗಿದೆಯೇ ಎಂಬ ಪ್ರಶ್ನೆಯನ್ನು ಪರಿಶೀಲಿಸಿದೆ ಮತ್ತು ***ದೀಪ್ತಿ ಪ್ರಕಾಶ್ ಬ್ಯಾನರ್ಜಿ –ವಿರುದ್ಧ – ಸತ್ಯೇಂದ್ರ ನಾಥ್ ಬೋಸ್‌ನ ನ್ಯಾಷನಲ್ ಸೆಂಟರ್ ಫಾರ್ ಬೇಸಿಕ್ ಸೈನ್ಸ್, ಕಲ್ಕತ್ತಾ ಮತ್ತು ಇತರರು***[6] (ವಿಮುಕ್ತಿಗೊಳಿಸುವ ಆದೇಶವು ನೌಕರನನ್ನು ಸೇವೆಯಿಂದ 'ಸರಳ ಬಿಡುಗಡೆ'ಗೊಳಿಸಲಾಗಿದೆಯೇ ಅಥವಾ 'ಕಳಂಕಿತ ಬಿಡುಗಡೆ'ಗೊಳಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ನಿರ್ಧರಿಸಲು ಅವೆರಡರ ಸ್ಥಾಪನೆ ಮತ್ತು ಉದ್ದೇಶದ ನಡುವೆ ಇರುವ ವ್ಯತ್ಯಾಸದ ಪ್ರಾಮುಖ್ಯತೆಯನ್ನು ಒತ್ತಿಹೇಳುವ ಅಗತ್ಯವಿರುತ್ತದೆ) ಪ್ರಕರಣದ ತೀರ್ಪನ್ನು ಸಹ ರಿಟ್ ನ್ಯಾಯಾಲಯವು ಪರಿಶೀಲಿಸಿದೆ. ಮುಂದುವರೆದು, ಮಾನ್ಯ ಕೇಂದ್ರ ಸರ್ಕಾರದ ನ್ಯಾಯವಾದಿಗಳು ಪ್ರಸ್ತುತಪಡಿಸಿದ ದಾಖಲೆಗಳನ್ನು ಕೂಲಂಕುಶವಾಗಿ ಅಧ್ಯಯನ ನಡೆಸಿದ ಮೇಲೆ ರಿಟ್ ನ್ಯಾಯಾಲಯವು, ಅಪೀಲುದಾರ/ಅರ್ಜಿದಾರರ ಕಾರ್ಯನಿರ್ವಹಣೆಯಲ್ಲಿ ನಿಯತಕಾಲಿಕ ಮೌಲ್ಯಧಾರಣೆ ಇತ್ತೆಂಬುದನ್ನು ಅಪೀಲುದಾರ/ಅರ್ಜಿದಾರರು ಸ್ವಭಾವತಾ ಗೈರು ಹಾಜರಾಗುವವರಾಗಿದ್ದರು ಮತ್ತು ಅದನ್ನು ಸರಿಪಡಿಸಿಕೊಳ್ಳಲು ಅಪೀಲುದಾರ/ಅರ್ಜಿದಾರರಿಗೆ ಬುದ್ಧಿವಾದವನ್ನು ಹೇಳಲಾಗಿತ್ತು ಮತ್ತು ಆದುದರಿಂದ, ಪ್ರೊಬೇಷನರಿ ಅವಧಿಯನ್ನು ಖಾಯಂಗೊಳಿಸಲು ಅಪೀಲುದಾರ/ಅರ್ಜಿದಾರರು ಅನರ್ಹರು ಎಂಬುದು ಪ್ರಾಧಿಕಾರಕ್ಕೆ ಕಂಡುಬಂದಿತ್ತೆಂಬುದನ್ನು ಗಮನಿಸಿದೆ ಮತ್ತು ರಿಟ್ ನ್ಯಾಯಾಲಯವು, ಅಪೀಲುದಾರ/ಅರ್ಜಿದಾರರು ಪ್ರೊಬೇಷನರಿ ಅವಧಿಯಲ್ಲಿ ಎಷ್ಟು ದಿನಗಳ ಕಾಲ ಕರ್ತವ್ಯದಲ್ಲಿದ್ದರು ಮತ್ತು ಅಂಥ ಅವಧಿಯಲ್ಲಿ ಎಷ್ಟು ದಿನಗಳ ಕಾಲ ರಜೆಯಲ್ಲಿದ್ದರು ಎಂಬುದನ್ನು ಸಹ ಗಮನಿಸಿದೆ.

ಈ ಎಲ್ಲಾ ಸನ್ನಿವೇಶಗಳಿಂದ ರಿಟ್ ನ್ಯಾಯಾಲಯವು ಮರೆಮಾಚಿರುವುದನ್ನು ತೆಗೆಯುವ ಉದ್ದೇಶದಿಂದ, ದಿನಾಂಕ: 15.3.2007ರ ಪ್ರಶ್ನಿತ ಬಿಡುಗಡೆ ಆದೇಶವು ದುರ್ನಡತೆಯ ಆರೋಪಗಳದ್ದಾಗಿತ್ತು ಅಥವಾ ಸರಳವಾಗಿ ಬಿಡುಗಡೆಗೊಳಿಸುವುದರ ಮೇಲೆ ಪರಿಣಾಮ ಬೀರಲು ಕೇವಲ ಪ್ರೇರೇಪಿಸುವ ಉದ್ದೇಶ ಹೊಂದಿತ್ತೋ ಎಂಬುದು ಕಂಡುಬಂದಿದ್ದು, ದಿನಾಂಕ: 15.3.2007ರ ಬಿಡುಗಡೆ ಆದೇಶವು 'ಕಳಂಕಿತ ಬಿಡುಗಡೆ' ಎಂದು ಹೇಳಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.

6. (1993) 3 ಎಸ್‌ಸಿಸಿ 60

ಮಾನ್ಯ ಸರ್ವೋಚ್ಚ ನ್ಯಾಯಾಲಯವು ***ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ -ವಿರುದ್ಧ- ಪಾಲಾಕ್ ಮೋದಿ,*** ಪ್ರಕರಣದ ತೀರ್ಪಿನಲ್ಲಿ ವಸ್ತುಸ್ಥಿತಿಯ ಮೇಲೆ ಗುರುತಿಸಲಾಗಿದೆ ಎಂದು ನಿರ್ಣಯಕ್ಕೆ ಬಂದಿದೆ.

***ರತ್ನೇಶ್ ಕುಮಾರ್ ಚೌಧರಿ-ವಿರುದ್ಧ- ಇಂದಿರಾ ಗಾಂಧಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ*** ಪ್ರಕರಣದಲ್ಲಿ (ಹಿಂದಿನ ತೀರ್ಪನ್ನು ಉಲ್ಲೇಖಿಸುತ್ತಾ) ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪುನರುಚ್ಚರಿಸಿರುವುದೇನೆಂದರೆ ಸಕ್ಷಮ ಪ್ರಾಧಿಕಾರವು, ಪ್ರೊಬೇಷನರರ ಅವಧಿಯನ್ನು ಖಾಯಂಗೊಳಿಸಲು ಸೂಕ್ತತೆಯನ್ನು ನಿರ್ಧರಿಸುವಾಗ, ದುರ್ನಡತೆಯ ಕೃತ್ಯವನ್ನು ಕಡೆಗಣಿಸಬೇಕು ಮತ್ತು ಯಾವುದೇ ತೊಡಕಿಲ್ಲದೇ ಆಕೆ/ಆತನ ಭವಿಷ್ಯದ ಹೆಸರು ಕೆಡಿಸದೆ ಅಥವಾ ಕಳಂಕವಿಲ್ಲದೆ ಸೇವೆಯಿಂದ ವಜಾಗೊಳಿಸಬಹುದು. ಇಲ್ಲವಾದಲ್ಲಿ ಅದು ಆಕೆ/ಆತನ ಭವಿಷ್ಯದ ವಿವರಣಾ ಪತ್ರದ ಮೇಲೆ ವ್ಯತಿರಿಕ್ತವಾಗಿ ಪರಿಣಾಮ ಬೀರಬಹುದು (ದುರ್ನಡತೆ/ದುರ್ವರ್ತನೆಯನ್ನು ನಿರ್ಧರಿಸದೆ ಸಾಮಾನ್ಯವಾಗಿ ಹೊರಹಾಕುವ ಉದ್ದೇಶದಿಂದ ವಿಶಿಷ್ಟವಾಗಿದ್ದರೆ) ಮತ್ತು ಸಕ್ಷಮ ಪ್ರಾಧಿಕಾರದ ಅಂತಿಮ ನಿರ್ಧಾರವಾದ ಪ್ರೊಬೇಷನರಿ ಅವಧಿಯ ನೌಕರನನ್ನು ಕಳಂಕರಹಿತ ಆದೇಶದಿಂದ ಸೇವೆಯಿಂದ ಬಿಡುಗಡೆಗೊಳಿಸಲು ದುರ್ನಡತೆ/ದುರ್ವರ್ತನೆ ಮೂಲವಾಗಿದ್ದರೂ ಸಹ, ನ್ಯಾಯಾಲಯವು ಮರೆಮಾಚಿರುವುದನ್ನು ತೆಗೆಯಬಹುದು ಮತ್ತು 'ಸರಳ ಬಿಡುಗಡೆ'ಯನ್ನು ಉದ್ಯೋಗದಾತನು ನೌಕರನ ದುರ್ನಡತೆಯ ಕೃತ್ಯಕ್ಕೆ ಶಿಕ್ಷಿಸಿರುವುದನ್ನು ಸಹ ಹೇಳಬಹುದು. ಮುಂದುವರೆದು, ರಿಟ್ ನ್ಯಾಯಾಲಯವು, ಮರೆಮಾಚಿರುವ ವಿಷಯವನ್ನು ತೆಗೆದ ನಂತರ, ದಿನಾಂಕ: 15.3.2007ರ ಪ್ರಶ್ನಿತ ಬಿಡುಗಡೆ ಆದೇಶವು ದುರ್ನಡತೆಯ ಆರೋಪದ ಮೇಲೆ ರೂಪಿತವಾಗಿದೆಯೇ ಎಂಬ ವಿಚಾರವನ್ನು ಖಚಿತಪಡಿಸಿಕೊಳ್ಳಬಹುದು ಮತ್ತು ಪ್ರಕರಣದ ವಸ್ತುಸ್ಥಿತಿ ಮತ್ತು ಸನ್ನಿವೇಶಗಳ ಆಧಾರದ ಮೇಲೆ ಬಿಡುಗಡೆ ಆದೇಶವು ಕಳಂಕರಹಿತವಾದುದು ಮತ್ತು ಅದು 'ಸರಳ ಬಿಡುಗಡೆ' ಆದೇಶ ಎಂದು ರಿಟ್ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ ಮತ್ತು ಅಪೀಲುದಾರ/ಅರ್ಜಿದಾರರು ಈ ಅಂತರ ನ್ಯಾಯಾಲಯದ ಅಪೀಲಿಗೆ ಹಸ್ತಕ್ಷೇಪ ಮಾಡಿರುವುದಿಲ್ಲ ಮತ್ತು ದಿನಾಂಕ: 15.3.2007ರಲ್ಲಿ ಉಪ

ಕಮಾಂಡೆಂಟ್ ಮತ್ತು 4ನೇ ಪ್ರತ್ಯರ್ಜಿದಾರರು ವಿಷಯ ತಿಳುವಳಿಕೆ ಪತ್ರವನ್ನು ಮತ್ತು ಪ್ರಶ್ನಿತ ಬಿಡುಗಡೆ ಆದೇಶವನ್ನು ಏಕಕಾಲದಲ್ಲಿ ಹೊರಡಿಸಿರುತ್ತಾರೆ ಮತ್ತು ದಿನಾಂಕ: 15.3.2007ರ ಪ್ರಶ್ನಿತ ಬಿಡುಗಡೆ ಆದೇಶವು ದುರ್ನಡತೆಯ ಆರೋಪದಾಗಿದೆ ಎಂಬುದನ್ನು ಊಹಿಸಲಾಗುವುದಿಲ್ಲ ಎಂದು ತಿಳಿಸುತ್ತದೆ.

ಚರ್ಚೆಯನುಸಾರ, ಸ್ಪಷ್ಟವಾಗಿ ಪರಿಶೀಲನೆಗೆ ಒಳಪಡುವ ಪ್ರಶ್ನೆಗಳೆಂದರೆ ಅಪೀಲುದಾರರು ಪ್ರೊಬೇಷನರಿ ಅವಧಿಯ ಭಾವಿತ ದೃಢೀಕರಣದ ಅನುಕೂಲ ಪಡೆಯಲು ಹಕ್ಕುಳ್ಳವರಾಗಿದ್ದಾರೆಯೇ ಮತ್ತು ಅಪೀಲುದಾರರು/ಅರ್ಜಿದಾರರು ರಿಟ್ ನ್ಯಾಯಾಲಯದ 2010ರ ಆದೇಶವಾದ ರಿಟ್ ಅರ್ಜಿ ಸಂಖ್ಯೆ: 12480ಗೆ ಹಸ್ತಕ್ಷೇಪ ಆಧಾರವಿದೆಯೇ ಎಂಬುದಾಗಿರುತ್ತದೆ ಮತ್ತು ಈ ಪ್ರಶ್ನೆಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಈ ಅಂತರ ನ್ಯಾಯಾಲಯದ ಅಪೀಲನ್ನು ತದನುಸಾರವಾಗಿ ವಜಾಗೊಳಿಸಲಾಗಿದೆ. ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.

---